ಶ್ರೀ ಎನ್. ಚಲುವರಾಯಸ್ವಾಮಿ:– ಹಾರಂಗಿಯಿಂದ, ಕಬಿನಿಯಿಂದ, ಕೆ.ಆರ್.ಎಸ್.ನಿಂದ, ಹೇಮಾವತಿಯಿಂದ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ. ಆದರೆ ಅವುಗಳ ಅಚ್ಚುಕಟ್ಟಿನಲ್ಲಿ ಅಂದರೆ ಹಾಸನ, ಮಂಡ್ಯ, ಮೈಸೂರಿನಲ್ಲಿ ರೈತರು ಕಬ್ಬು ಬೆಳೆದಿದ್ದು ಅಲ್ಲಿಗೆ ನೀರು ಬಿಡುತ್ತಿಲ್ಲ. ಕುಡಿಯುವ ನೀರಿಗಾಗಿ ಕೆರೆಕಟ್ಟೆಗಳನ್ನು ತುಂಬಿಸುವುದಕ್ಕೆ ನೀರು ಕೊಡುತ್ತಿಲ್ಲ. ಇದರ ಬಗ್ಗೆ ಸರ್ಕಾರ ದಯಮಾಡಿ ಉತ್ತರ ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ:– ಆತಂಕ ಪಡುವುದು ಬೇಡ, ಉತ್ತರ ಕೊಡಿಸುತ್ತೇವೆ.

ಶ್ರೀ ಜಗದೀಶ ಶೆಟ್ಟರ್:– ನೀರಾವರಿ ಸಚಿವರಿಂದ ಒಂದು ಹೇಳಿಕೆ ಕೊಡಿಸಿ.

ಅಧ್ಯಕ್ಷರು:– ಆಯಿತು, ಕೊಡುತ್ತಾರೆ. ಶೆಟ್ಟರ್‌ರವರೇ, ನೀವು ಪ್ರಾರಂಭಮಾಡಿ.

(ಗೊಂದಲ)

ಅಧ್ಯಕ್ಷರು:– ಆಮೇಲೆ ಅವರು ಹೇಳಿಕೆ ಕೊಡುತ್ತಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ನಮ್ಮ ನಾಲೆಗಳಲ್ಲಿ ನೀರಿಲ್ಲ. ನೀರಿಲ್ಲದೇ ನಾಲೆಗಳು ಒಣಗುತ್ತಿವೆ. ನಮ್ಮ ನಾಲೆಗಳಿಗೆ ನೀರು ಕೊಟ್ಟಾದ ಮೇಲೆ ಬೇಕಾದರೆ ಅವರು ನೀರು ಬಿಡಲಿ.

ಅಧ್ಯಕ್ಷರು:– ಹೇಳಿಕೆ ಕೊಡುತ್ತಾರೆ, ಆಮೇಲೆ ನೀವು ಚರ್ಚೆ ಮಾಡಿ.

2. ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ದಿನಗಳಲ್ಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದನ್ನು ತಡೆಯುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಸನ್ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇರೆಗೆ ಚರ್ಚೆ ಮಾಡಲು ತಾವು ಅವಕಾಶ ಕೊಟ್ಟಿದ್ದೀರಿ. ಈಗಾಗಲೇ ಕಳೆದ ಗುರುವಾರ ಮತ್ತು ಶುಕ್ರವಾರ ಈ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ವಿಚಾರಗಳು ಸದನದಲ್ಲಿ ಚರ್ಚೆಯಾಗಿವೆ.

ಅಧ್ಯಕ್ಷರು:– ನಾನು ಒಂದು ಮಾತನ್ನು ಹೇಳುತ್ತೇನೆ, ಕುಮಾರಸ್ವಾಮಿಯವರೇ, ತಾವು ಕಳುಹಿಸಿದ ನಿಲುವಳಿ ಸೂಚನೆಯನ್ನೂ ಇದರ ಜೊತೆಗೇ ಸೇರಿಸಿ ಮಾಡೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಗೃಹ ಇಲಾಖೆಗೆ ಸಂಬಂಧಿಸಿದ ಎಲ್ಲವನ್ನೂ ತೆಗೆದುಕೊಂಡುಬಿಡಿ.

ಶ್ರೀ ಜಗದೀಶ್ ಶೆಟ್ಟರ್:– ಅದು ಸರಿಯಾಗುವುದಿಲ್ಲ. ವಿಷಯ ಡೈವರ್ಟ್ ಆಗುತ್ತದೆ.

ಅಧ್ಯಕ್ಷರು:– ಗೃಹ ಇಲಾಖೆಗೆ ಸಂಬಂಧಿಸಿದ ಎಲ್ಲವನ್ನೂ ತೆಗೆದುಕೊಳ್ಳಲು ಆಗುವುದಿಲ್ಲ. ಏಕೆಂದರೆ ಗೃಹ ಇಲಾಖೆ ಭಾಗಶಃ ಮುಖ್ಯಮಂತ್ರಿಯಗಳಿಗೂ ಸೇರುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅದರಿಂದ ಚರ್ಚೆಯ ಸಮಯ ಉಳಿಯುತ್ತದೆ.

ಶ್ರೀ ಜಗದೀಶ್ ಶೆಟ್ಟರ್:– ನಾವು ಕೊಟ್ಟಿರುವ ವಿಚಾರದ ಬಗ್ಗೆ ನಾವು ಸ್ಪೆಸಿಫಿಕ್‌ಆಗಿ ಮಾತನಾಡಬೇಕಾಗುತ್ತದೆ. ಏಕೆಂದರೆ ಇದು ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿದೆ.

ಅಧ್ಯಕ್ಷರು:– ನಾನು ಏನು ಹೇಳುತ್ತೇನೆ ಎಂದರೆ ಬೇರೆ legislative business ಸಹ ಇವೆ. ಅದಕ್ಕಾಗಿ, ಒಂದು ಸಮಯವನ್ನು ನಿಗದಿ ಮಾಡಿಕೊಂಡು, ಇದನ್ನು ಒಂದು ಗಂಟೆ ಅಥವಾ ಒಂದೂವರೆ ಗಂಟೆಯೊಳಗಾಗಿ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್:– ಆಯಿತು, ಆದಷ್ಟು ಬ್ರೀಫ್‌ಆಗಿ ನಾನು ಮಾತನಾಡುತ್ತೇನೆ.

ಅಧ್ಯಕ್ಷರು:– ಆಯಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ವಿಧೇಯಕಗಳನ್ನು ಮಂಡಿಸುವುದಿತ್ತು. ಮಂಡಿಸಲು ಅವಕಾಶ ಕೊಡಿ.

ಶ್ರೀ ಜಗದೀಶ ಶೆಟ್ಟರ್:– ವಿಧೇಯಕಗಳನ್ನು ಆಮೇಲೆ ಮಂಡಿಸಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಎರಡು ನಿಮಿಷವಾಗುತ್ತದೆ ಅಷ್ಟೇ.

ಶ್ರೀ ಜಗದೀಶ್ ಶೆಟ್ಟರ್:– ಆಮೇಲೆ ಮಂಡಿಸಿ. ಮಂಡಿಸುವುದು ಐದು ನಿಮಿಷದ ಕೆಲಸ. ಬಿಲ್‌ಗಳಿಗೆ ನಾವೇನು ತೊಂದರೆ ಮಾಡುವುದಿಲ್ಲ, ಪಾಸ್ ಮಾಡೋಣವಂತೆ. ಆದರೆ ಪ್ರಮುಖವಾದಂಥ ಬಿಲ್‌ಗಳ ಬಗ್ಗೆ ಚರ್ಚೆಯಾಗಬೇಕಾಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಂಡಿಸುವುದು ಅಷ್ಟೇ ಅಲ್ಲವೇ, ತಾವು ಆಮೇಲೆ ಚರ್ಚೆ ಮಾಡಿ. ಅದನ್ನು ಮಂಡಿಸಿದರೆ, ನಂತರ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಮಯವಿರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಬಿಲ್‌ಗಳನ್ನು ಆಮೇಲೆ ತೆಗೆದುಕೊಳ್ಳಬಹುದು.

(ಗೊಂದಲ)

ಅಧ್ಯಕ್ಷರು:– ಒಂದೆರಡು ನಿಮಿಷಗಳಲ್ಲಿ ಮಂಡಿಸಿ ಬಿಡುತ್ತಾರಷ್ಟೇ, ಚರ್ಚೆ ಇಲ್ಲ, ಏನೂ ಇಲ್ಲ.

ಶ್ರೀ ಜಗದೀಶ ಶೆಟ್ಟರ್:– ಆಯಿತು, ಮಂಡಿಸಿ.